ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ-04/ಯುಸಂಸ್ಪ/2017-18

ನಿರ್ದೇಶಕರ ಕಛೇರಿ.
ಪದವಿ ಪೂರ್ವ ಶಿಕ್ಷಣ ಇಲಾಖೆ
ಸಂಪಿಗೆ ರಸ್ತೆ. 18ನೇ ಕ್ರಾಸ್
ಮಲ್ಲೇಶ್ವರಂ. ಬೆಂಗಳೂರು-12
ದಿನಾಂಕ:27-12-2017.

## ಸುತ್ತೋಲೆ

ವಿಷಯ: 2017-18ನೇ ಶೈಕ್ಷಣಿಕ ಸಾಲಿನ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಯನ್ನು ದಿನಾಂಕ 12/01/2018ರಂದು ಆಯೋಜಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಸುತ್ತೋಲೆ ಸಂಖ್ಯೆ:ಪಪೂಶಿ/ಶೈಶಾ-04/ಯುಸಂಸ್ಪ/2017-18 ದಿನಾಂಕ 08/11/2017.

2)ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಂವ್ಯಶಾಇ 10 ಯುಸಂಸ್ಪ 2017 ದಿನಾಂಕ 20/12/2017.

*****

ದಿನಾಂಕ 12/01/2018ರಂದು ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯನ್ನು ಬೆಂಗಳೂರಿನ ಕೆಜಿಎಸ್ ಸಭಾಂಗಣ, ಕಬ್ಬನ್ ಪಾರ್ಕ್‌ದಲ್ಲಿ ಉಲ್ಲೇಖ-1 ರ ಸೂಚನೆಯಂತೆ ಆಯೋಜಿಸಲಾಗಿದೆ. ಪ್ರಯುಕ್ತ, ಪ್ರತಿ ಜಿಲ್ಲೆಯಲ್ಲಿ ವಿಜೇತರಾದ 02 ವಿದ್ಯಾರ್ಥಿಗಳು ಹಾಗೂ ಒಬ್ಬ ಉಸ್ತುವಾರಿ ಉಪನ್ಯಾಸಕರನ್ನು ಕಾರ್ಯಕ್ರಮದ ದಿನದಂದು ಭಾಗವಹಿಸಲು ಅನುಕೂಲವಾಗುವಂತೆ ನಿಯೋಜಿಸಲು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸೂಚಿಸಲಾಗಿದೆ. ಕಾರ್ಯಕ್ರಮದ ದಿನಾಂಕ 12/01/2018ರಂದು ಪೂರ್ವಾಹ್ನ 9-00 ಗಂಟೆಗೆ ಪ್ರಾರಂಭವಾಗುವುದರಿಂದ ದಿನಾಂಕ 11/01/2018ರ ಸಂಜೆ 6-00 ಗಂಟೆಯಿಂದ ದಿನಾಂಕ 12/01/2018ರಂದು ಸಂಜೆ 6-00 ಗಂಟೆವರೆಗೆ ಎನ್‌ಜಿಓ ಭವನದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳೊಂದಿಗೆ ಆಗಮಿಸುವ ಉಸ್ತುವಾರಿ ಉಪನ್ಯಾಸಕರು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸುರಕ್ಷತೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸುವುದು. ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸುರಕ್ಷತೆಗೆ ಧಕ್ಕೆಯಾದಲ್ಲಿ ಸಂಬಂಧಿಸಿದ ಉಪನ್ಯಾಸಕರನ್ನು ಹೊಣೆ ಮಾಡಲಾಗುವುದು.

**ಈ ಸಾಲಿನ ರಾಜ್ಯಮಟ್ಟದ ಯುವಸಂಸತ್ ಸ್ಪರ್ಧೆ ನಡೆಸಲು ಹಾಗೂ ಕಾರ್ಯಕ್ರಮದ ನೋಡಲ್ ಅಧಿಕಾರಿಯಾಗಿ ಶ್ರೀಮತಿ ನಾಗವೇಣಿ ಸಿ, ಉಪ ನಿರ್ದೇಶಕರು, ಬೆಂಗಳೂರು ಉತ್ತರ ಜಿಲ್ಲೆ, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಇವರನ್ನು ನೇಮಿಸಲಾಗಿದೆ.(ಮೊಬೈಲ್ ಸಂಖ್ಯೆ 9008481498)**

ಉಲ್ಲೇಖ-01ರ ಈ ಕಛೇರಿಯ ಸುತ್ತೋಲೆಯಲ್ಲಿ ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ದಿನಾಂಕ 20/12/2016ರೊಳಗಾಗಿ ನಡೆಸಲು ಸೂಚಿಸಲಾಗಿತ್ತು. ಆದಾಗ್ಯೂ ಕೆಲವು ಜಿಲ್ಲೆಗಳಲ್ಲಿ ಇದುವರೆವಿಗೂ ಕಾರ್ಯಕ್ರಮವನ್ನು ನಡೆಸದಿರುವುದನ್ನು ಗಮನಿಸಲಾಗಿದೆ. ಇನ್ನು ಕೆಲವು ಜಿಲ್ಲೆಗಳು ಸೂಚನೆಯಂತೆ ಕಾನೂನು ಮತ್ತು ಸಂಸದೀಯ ಇಲಾಖೆಯ ಸಹಭಾಗಿತ್ವ ಇಲ್ಲದೆ ನಡೆಸಿರುವುದನ್ನು ಸಂಸದೀಯ ವ್ಯವಹಾರಗಳ ಇಲಾಖೆಯವರು ಆಕ್ಷೇಪಿಸಿರುತ್ತಾರೆ. ಈ ಸಂಬಂಧವಾಗಿ ಸದರಿ ಇಲಾಖೆಯನ್ನು ಸಂಪರ್ಕಿಸಿ ಸೂಕ್ತ ಮಾರ್ಗದರ್ಶನ ಪಡೆಯುವುದು.

ಕಾರ್ಯಕ್ರಮ ನಡೆಸದಿರುವ ಎಲ್ಲಾ ಜಿಲ್ಲೆಗಳು ಕಡ್ಡಾಯವಾಗಿ ಈ ತಿಂಗಳ ಅಂತ್ಯದೊಳಗೆ ಕಾರ್ಯಕ್ರಮವನ್ನು ತಪ್ಪದೇ ಸೂಚಿಸಿದಂತೆ ನಡೆಸುವುದು.

ಎಲ್ಲಾ ಜಿಲ್ಲೆಗಳು ಕಾರ್ಯಕ್ರಮ ನಡೆಸಿದ ಕುರಿತ ವರದಿಯನ್ನು ದಿನಾಂಕ 31/12/2016ರೊಳಗೆ ಈ ಕಛೇರಿಯ ಇ-ಮೇಲ್ academic.pue@gmail.com ಗೆ ಹಾಗೂ ಒಂದು ಪ್ರತಿಯನ್ನು ಸಂಸದೀಯ ವ್ಯವಹಾರಗಳ ಇಲಾಖೆಯವರ ಇ-ಮೇಲ್ Secy-dpal@karnataka.gov.in ವಿಳಾಸಕ್ಕೆ ಕಳುಹಿಸುವುದು.

ಕಾರ್ಯಕ್ರಮವನ್ನು ಸೂಚನೆಯಂತೆ ನಡೆಸದ ಹಾಗೂ ದಾಖಲೀಕರಣ ವರದಿಯನ್ನು ಸಲ್ಲಿಸದ ಜಿಲ್ಲೆಗಳ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ಕೊಠಡಿ ಸಂಖ್ಯೆ 136, ವಿಧಾನ ಸೌಧ, ಬೆಂಗಳೂರು-560001.
3. ಶಾಖಾಧಿಕಾರಿಗಳು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳ ಇ-ಮೇಲ್‌ಗೆ ಅಳವಡಿಸಲು ಹಾಗೂ ವೆಬ್ ಸೈಟ್‌ಗೆ ಅಳವಡಿಸಲು.
4. ಕಛೇರಿ ಪ್ರತಿ.